# ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಅಧಿನಿಯಮ, 1985

27.01.2007.ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 32 ರಿಂದ 44ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

## ಅಧ್ಯಾಯ – I

### ಪ್ರಾರಂಭಿಕ

**ಪ್ರಕರಣಗಳು**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು


## ಅಧ್ಯಾಯ – II

### ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ


3. ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರದ ರಚನೆ ಮತ್ತು ನಿಗಮನ
4. ಸದಸ್ಯರ ಸೇವಾ ಷರತ್ತುಗಳು
4ಎ. ಸದಸ್ಯನಾಗಿ ನೇಮಕಗೊಳ್ಳಲು ಅನರ್ಹತೆಗಳು
5. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು
5ಎ. ಸಭೆಗಳು
6. ಸದಸ್ಯರನ್ನು ತೆಗೆದುಹಾಕುವುದು, ಇತ್ಯಾದಿ
7. ಖಾಲಿಸ್ಥಾನ ಇತ್ಯಾದಿಯಿಂದಾಗಿ ಪ್ರಾಧಿಕಾರದ ವ್ಯವಹರಣೆಗಳು ಅಸಿಂಧುವಾಗದಿರುವುದು
8. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು
9. ಸಲಹಾ ಸಮಿತಿಗಳು
10. ವ್ಯವಹಾರ ತತ್ವಗಳ ಮೇಲೆ ಪ್ರಾಧಿಕಾರವು ಕಾರ್ಯನಿರ್ವಹಿಸುವುದು.


## ಅಧ್ಯಾಯ – III

### ಸ್ವತ್ತು ಮತ್ತು ಕರಾರುಗಳು


11. ಕೇಂದ್ರ ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವುದು
12. ಪ್ರಾಧಿಕಾರವು ಕರಾರುಗಳನ್ನು ಮಾಡಿಕೊಳ್ಳುವುದು
13. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ನಿರ್ವಹಿಸುವ ವಿಧಾನ


## ಅಧ್ಯಾಯ – IV

### ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು


14. ಪ್ರಾಧಿಕಾರದ ಪ್ರಕಾರ್ಯಗಳು
15. ಯೋಜನೆಗಳ ತಿದ್ದುಪಡಿ
16. ಬಿಟ್ಟು ಬಿಡಲಾಗಿದೆ


## ಅಧ್ಯಾಯ – V

### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ


17. ಫೀಜು ಮತ್ತು ವೆಚ್ಚಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು
18. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು

18ಎ. ಪ್ರಾಧಿಕಾರದ ಸಾಲ ಪಡೆಯುವ ಅಧಿಕಾರಗಳು

19. ನಿಧಿಯ ರಚನೆ

20. ಬಜೆಟ್

21. ನಿಧಿಗಳ ಹೂಡಿಕೆ

22. ವಾರ್ಷಿಕ ವರದಿ

23. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

24. ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧಕರ ವರದಿಯನ್ನು ಸಂಸತ್ತಿನ ಮುಂದೆ ಇಡುವುದು

**ಅಧ್ಯಾಯ – VI**

**ಸಂಕೀರ್ಣ**

25. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ

26. ಪ್ರಾಧಿಕಾರಕ್ಕಾಗಿ ಭೂಮಿಯ ಕಡ್ಡಾಯ ಆರ್ಜನೆ

27. ಕೆಲವು ಕಾನೂನುಗಳ ಅನ್ವಯ, ಇತ್ಯಾದಿ

28. ಪ್ರವೇಶಾಧಿಕಾರ

29. ಅಧಿಕಾರಗಳ ಪ್ರತ್ಯಾಯೋಜನೆ

30. ಪ್ರಾಧಿಕಾರದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣನ

31. ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರುವುದು

32. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

33. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ

34. ನಿಯಮಗಳ ರಚನಾಧಿಕಾರ

35. ವಿನಿಯಮ ರಚನಾಧಿಕಾರ

36. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದಿಡುವುದು

37. ತೊಂದರೆಗಳನ್ನು ನಿವಾರಿಸುವ ಅಧಿಕಾರ

38. 1982ರ 49ನೇ ಅಧಿನಿಯಮದ ತಿದ್ದುಪಡಿ

# ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಅಧಿನಿಯಮ, 1985

[1985ರ ಅಧಿನಿಯಮ ಸಂಖ್ಯೆ 82]

[ಡಿಸೆಂಬರ್ 30, 1985]

ಹಡಗು ಮೂಲಕ ಸಾಗಣೆ ಮಾಡುವ ಮತ್ತು ನೌಕಾ ಸಂಚಾರದ ಉದ್ದೇಶಗಳಿಗಾಗಿ ಒಳನಾಡು ಜಲಮಾರ್ಗಗಳ ವಿನಿಯಮನ ಮತ್ತು ಅಭಿವೃದ್ಧಿಗಾಗಿ ಹಾಗೂ ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಒಂದು ಪ್ರಾಧಿಕಾರವನ್ನು ರಚಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಮೂವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಅಧಿನಿಯಮ, 1985 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ *ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಹೊಂದಿಕೊಂಡಿರುವ ಭೂಮಿ" ಎಂದರೆ ಎಲ್ಲೆ ಗೊತ್ತು ಮಾಡಿರಲಿ ಅಥವಾ ಮಾಡಿಲ್ಲದಿರಲಿ ರಾಷ್ಟ್ರೀಯ ಜಲಮಾರ್ಗಗಳಿಗೆ ಹೊಂದಿಕೊಂಡಿರುವ ಎಲ್ಲಾ ಭೂಮಿಗಳು;

(ಬಿ) "ಪ್ರಾಧಿಕಾರ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ;

(ಸಿ)"ಮಾರ್ಗ" ಎಂದರೆ ಸ್ವಾಭಾವಿಕವಾಗಿರುವ ಅಥವಾ ನಿರ್ಮಿಸಿದ ಯಾವುದೇ ಜಲಮಾರ್ಗ;

(ಡಿ)"ಸಂರಕ್ಷಣೆ" ಎಂಬುದರಲ್ಲಿ ಹೂಳು ಎತ್ತುವುದು, ತರಬೇತಿ, ಮುಚ್ಚುವುದು, ಮಾರ್ಗ ಪಲ್ಲಟ ಅಥವಾ ಮಾರ್ಗಗಳನ್ನು ಬಿಟ್ಟುಬಿಡುವುದು ಇವುಗಳು ಒಳಗೊಳ್ಳುತ್ತವೆ;

(ಇ) "ಸಂರಕ್ಷಣಾ ಕ್ರಮಗಳು" ಎಂದರೆ ಸಂರಕ್ಷಣೆಯ ಉದ್ದೇಶಗಳಿಗಾಗಿ ಇರುವ ಕ್ರಮಗಳು, ಆದರೆ ಇದರಲ್ಲಿ ಪ್ರವಾಹಗಳಿಂದ ದಡಗಳನ್ನು ರಕ್ಷಿಸಲು ಅಥವಾ ಮುಖ್ಯವಾಗಿ ಹಡಗು ಮೂಲಕ ಸಾಗಣೆ ಮತ್ತು ನೌಕಾ ಸಂಚಾರಗಳಿಗೆ ಸಂಬಂಧಿಸಿದ ಕಾರಣಗಳಿಂದ ಉಂಟಾಗುವ ದಡಗಳ ಕೊರೆತವನ್ನು ತಡೆಯಲು ತೆಗೆದುಕೊಳ್ಳುವ ಕ್ರಮಗಳು ಒಳಗೊಳ್ಳುವುದಿಲ್ಲ;

(ಎಫ್) "ಮೂಲ ಪರಿಕರ" ಎಂಬುದರಲ್ಲಿ ಹಡಗು ಕಟ್ಟೆಗಳು, ಸರಕು ಕಟ್ಟೆಗಳು, ಇಳಿ ಕಟ್ಟೆಗಳು, ಇಳಿಯುವ ಮಜಲುಗಳು, ಮಟ್ಟ ಬದಲಾವಣೆಯ ಕಟ್ಟೆಗಳು, ತೇಲು ಗುರುತುಗಳು, ಒಳನಾಡು ಬಂದರುಗಳು, ಸರಕು ನಿರ್ವಹಣಾ ಸಲಕರಣೆ, ರಸ್ತೆ ಮತ್ತು ರೈಲು ಮಾರ್ಗ ಮತ್ತು ಸರಕು ದಾಸ್ತಾನು ಸ್ಥಳಗಳು ಒಳಗೊಳ್ಳುತ್ತವೆ ಮತ್ತು "ಮೂಲ ಪರಿಕರ ಸೌಲಭ್ಯಗಳು" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಜಿ) "ಸದಸ್ಯ" ಎಂದರೆ 3ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಸದಸ್ಯ;

(ಎಚ್)"ರಾಷ್ಟ್ರೀಯ ಜಲಮಾರ್ಗ" ಎಂದರೆ ರಾಷ್ಟ್ರೀಯ ಜಲಮಾರ್ಗ (ಗಂಗಾ-ಭಾಗೀರಥಿ-ಹೂಗ್ಲಿ ನದಿಗಳ ಅಲಹಾಬಾದ್-ಹಾಲ್ದಿಯಾ ಹರಹು) ಅಧಿನಿಯಮ, 1982ರ (1982ರ 49) 2ನೇ ಪ್ರಕರಣದ ಮೂಲಕ ರಾಷ್ಟ್ರೀಯ ಜಲಮಾರ್ಗವೆಂದು ಘೋಷಿಸಲಾದ ಜಲಮಾರ್ಗ;

**ವಿವರಣೆ.–** ಸಂಸತ್ತು ಕಾನೂನಿನ ಮೂಲಕ ಇತರ ಯಾವುದೇ ಜಲಮಾರ್ಗವನ್ನು ರಾಷ್ಟ್ರೀಯ ಜಲಮಾರ್ಗವೆಂದು ಘೋಷಿಸಿದರೆ, ಹಾಗೆ ಘೋಷಿಸಿದ ದಿನಾಂಕದಿಂದ ಅಂಥ ಇತರ ಜಲಮಾರ್ಗವೂ ಸಹ,–

(i) ಈ ಖಂಡದ ಅರ್ಥವ್ಯಾಪ್ತಿಯೊಳಗೆ ರಾಷ್ಟ್ರೀಯ ಜಲಮಾರ್ಗವೆಂದು ಭಾವಿಸತಕ್ಕದ್ದು; ಮತ್ತು

(ii) ಈ ಅಧಿನಿಯಮದ ಉಪಬಂಧಗಳು, ಅವಶ್ಯ ಮಾರ್ಪಾಟುಗಳೊಂದಿಗೆ (ಈ ಅಧಿನಿಯಮದ ಪ್ರಾರಂಭಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು ಮೇಲ್ಕಂಡ ದಿನಾಂಕಕ್ಕೆ ಮಾಡಿದ ಉಲ್ಲೇಖವೆಂದು ಅರ್ಥೈಸುವುದಕ್ಕಾಗಿರುವ ಮಾರ್ಪಾಟೂ ಸೇರಿ) ಅಂಥ ರಾಷ್ಟ್ರೀಯ ಜಲಮಾರ್ಗಕ್ಕೆ ಅನ್ವಯವಾಗತಕ್ಕದ್ದು.

(ಐ) "ನೌಕಾ ಸಂಚಾರ ಯೋಗ್ಯ ಮಾರ್ಗ" ಎಂದರೆ ವರ್ಷಪೂರ್ತಿ ಅಥವಾ ವರ್ಷದ ಯಾವುದೇ ಭಾಗದಲ್ಲಿ ನೌಕಾ ಸಂಚಾರಕ್ಕೆ ಯೋಗ್ಯವಾದ ಮಾರ್ಗ;

(ಜೆ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಕೆ) "ವಿನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗಿನ ಪ್ರಾಧಿಕಾರವು ರಚಿಸಿದ ವಿನಿಯಮಗಳು;

(ಎಲ್)"ನಿಯಮಗಳು" ಎಂದರೆ ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ನಿಯಮಗಳು.

## ಅಧ್ಯಾಯ – II

## ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ

**3. ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರದ ರಚನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ, ಈ ಅಧಿನಿಯಮದ ಉದ್ದೇಶಗಳಿಗಾಗಿ ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲ್ಕಂಡ ಹೆಸರಿನಿಂದ ಕರೆಯಲಾಗುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಇದು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಚರ ಮತ್ತು ಸ್ಥಿರ, ಈ ಎರಡೂ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಹಾಗೂ ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನೇಮಕ ಮಾಡುವ ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ,–

(ಎ) ಅಧ್ಯಕ್ಷ;

(ಬಿ) ಉಪಾಧ್ಯಕ್ಷ;

(ಸಿ) ಮೂವರಿಗಿಂತ ಹೆಚ್ಚಿಲ್ಲದ ಪೂರ್ಣಕಾಲಿಕ ಸದಸ್ಯರು; ಮತ್ತು

(ಡಿ) ಮೂವರಿಗಿಂತ ಹೆಚ್ಚಿಲ್ಲದ ಅರೆಕಾಲಿಕ ಸದಸ್ಯರು.

(4) ಪ್ರಾಧಿಕಾರವು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಯಾವುದೇ ಉಪಬಂಧವನ್ನು ಪಾಲಿಸಲು ತಾನು ಅಪೇಕ್ಷಿಸುವಂಥ ಯಾರೇ ವ್ಯಕ್ತಿಯ ಸಹಾಯ ಅಥವಾ ಸಲಹೆಯನ್ನು ಪಡೆಯಲು ಅಂಥ ವ್ಯಕ್ತಿಯನ್ನು ತನ್ನ ಜೊತೆ ಸೇರಿಸಿಕೊಳ್ಳಬಹುದು ಮತ್ತು ಹಾಗೆ ಸೇರಿಸಿಕೊಳ್ಳಲಾದ ವ್ಯಕ್ತಿಯು ತಾನು ಯಾವ ಉದ್ದೇಶಕ್ಕಾಗಿ ಸೇರ್ಪಡೆಯಾಗಿದ್ದಾನೋ ಆ ಉದ್ದೇಶಕ್ಕೆ ಸುಸಂಗತವಾದ ಪ್ರಾಧಿಕಾರದ ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕು ಹೊಂದಿರತಕ್ಕದ್ದು. ಆದರೆ, ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**4. ಸದಸ್ಯರ ಸೇವಾ ಷರತ್ತುಗಳು.**- ಸದಸ್ಯರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**4ಎ. ಸದಸ್ಯನಾಗಿ ನೇಮಕಗೊಳ್ಳಲು ಅನರ್ಹತೆಗಳು.**- ಒಬ್ಬ ವ್ಯಕ್ತಿಯು,-

(ಎ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಕಾರವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಒಂದು ಸಕ್ಷಮ ನ್ಯಾಯಾಲಯದಿಂದ ಹಾಗೆಂದು ಘೋಷಿಸಲಾಗಿದ್ದರೆ; ಅಥವಾ

(ಡಿ) ಅವನನ್ನು ಸರ್ಕಾರದ ಅಥವಾ ಸರ್ಕಾರದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಒಳಪಟ್ಟಿರುವ ಒಂದು ಕಂಪನಿಯ ಸೇವೆಯಿಂದ ತೆಗೆದುಹಾಕಿದ್ದರೆ ಅಥವಾ ವಜಾ ಮಾಡಿದ್ದರೆ; ಅಥವಾ

(ಇ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ, ಒಬ್ಬ ಸದಸ್ಯನಾಗಿ ತನ್ನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಂಭವವಿರುವಂತೆ ಪ್ರಾಧಿಕಾರದಲ್ಲಿ ಅಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಹೊಂದಿದ್ದರೆ

- ಒಬ್ಬ ಸದಸ್ಯನಾಗಿ ನೇಮಕಗೊಳ್ಳಲು ಅನರ್ಹನಾಗತಕ್ಕದ್ದು.

**5. ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು.**- (1) ಪ್ರಾಧಿಕಾರದ ಅಧ್ಯಕ್ಷನು, ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆ ವಹಿಸುವುದರ ಜೊತೆಗೆ ಪ್ರಾಧಿಕಾರವು ತನಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹಾಗೂ ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರದ ಉಪಾಧ್ಯಕ್ಷನು, ಪ್ರಾಧಿಕಾರವು ನಿಯಮಿಸಬಹುದಾದ ಅಥವಾ ಅದು ತನಗೆ ಪ್ರತ್ಯಾಯೋಜಿಸಬಹುದಾದಂಥ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**5ಎ. ಸಭೆಗಳು.**- (1) ಪ್ರಾಧಿಕಾರವು, ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ವೇಳೆಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರಲ್ಲಿನ ಕೋರಂ ಸೇರಿದಂತೆ, ಅದರ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ಕಾರ್ಯವಿಧಾನದ ಅಂತ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷನು ಅಥವಾ ಇವರಿಬ್ಬರ ಗೈರು ಹಾಜರಿಯಲ್ಲಿ, ಪ್ರಾಧಿಕಾರದ ಸಭೆಯಲ್ಲಿ ಹಾಜರಿರುವ ಸದಸ್ಯರಿಂದ ಚುನಾಯಿತನಾದಂಥ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲ ಪ್ರಶ್ನೆಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು, ಮತ್ತು ಸಮ ಮತಗಳು ಬಂದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನು ಅಥವಾ ಇವರಿಬ್ಬರ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

**6. ಸದಸ್ಯರನ್ನು ತೆಗೆದುಹಾಕುವುದು, ಇತ್ಯಾದಿ.**- (1) ಕೇಂದ್ರ ಸರ್ಕಾರವು, ಯಾರೇ ಸದಸ್ಯನು,-

(ಎ) ಕಾರ್ಯನಿರ್ವಹಿಸಲು ನಿರಾಕರಿಸಿದ್ದಾನೆಂದು;

(ಬಿ) ಕಾರ್ಯನಿರ್ವಹಿಸಲು ಅಸಮರ್ಥನಾಗಿದ್ದಾನೆಂದು;

(ಸಿ) ತನ್ನ ಪದವನ್ನು ದುರುಪಯೋಗಿಸಿಕೊಂಡಿದ್ದು, ಅವನನ್ನು ಪದದಲ್ಲಿ ಮುಂದುವರಿಸುವುದರಿಂದ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುವುದೆಂದು; ಅಥವಾ

(ಡಿ) ಅನ್ಯಥಾ ಸದಸ್ಯನಾಗಿ ಮುಂದುವರೆಯಲು ಸೂಕ್ತನಲ್ಲವೆಂದು ಅಭಿಪ್ರಾಯಪಟ್ಟರೆ

– ಅವನನ್ನು ಪ್ರಾಧಿಕಾರದಿಂದ ತೆಗೆದು ಹಾಕಬಹುದು.

(2) ಕೇಂದ್ರ ಸರ್ಕಾರವು, ಯಾರೇ ಸದಸ್ಯನನ್ನು ಅವನ ವಿರುದ್ಧದ ವಿಚಾರಣೆಯು ಇತ್ಯರ್ಥವಾಗುವವರೆಗೆ ಅಮಾನತ್ತಿನಲ್ಲಿಡಬಹುದು.

(3) ಕೇಂದ್ರ ಸರ್ಕಾರಕ್ಕೆ ತನ್ನ ವಿವರಣೆಯನ್ನು ಸಲ್ಲಿಸಲು ಸಂಬಂಧಪಟ್ಟ ಸದಸ್ಯನಿಗೆ ಒಂದು ಅವಕಾಶವನ್ನು ಕೊಟ್ಟ ಹೊರತು, ಈ ಪ್ರಕರಣದ ಮೇರೆಗೆ ಅವನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ ಮತ್ತು ಅಂಥ ಆದೇಶವನ್ನು ಮಾಡಿದಾಗ, ತೆಗೆದುಹಾಕಲಾದ ಸದಸ್ಯನ ಸ್ಥಾನವು ಖಾಲಿಯಾಗಿದೆಯೆಂದು ಘೋಷಿಸತಕ್ಕದ್ದು.

(4) ಈ ಪ್ರಕರಣದ ಮೇರೆಗೆ ತೆಗೆದು ಹಾಕಲಾದ ಒಬ್ಬ ಸದಸ್ಯನು, ಸದಸ್ಯನಾಗಿ ಅಥವಾ ಪ್ರಾಧಿಕಾರದ ಯಾವುದೇ ಸ್ಥಾನದಲ್ಲಿ ಪುನರ್‌ನೇಮಕವಾಗಲು ಅರ್ಹನಾಗಿರತಕ್ಕದ್ದಲ್ಲ.

**7. ಖಾಲಿಸ್ಥಾನ ಇತ್ಯಾದಿಯಿಂದಾಗಿ ಪ್ರಾಧಿಕಾರದ ವ್ಯವಹರಣೆಗಳು ಅಸಿಂಧುವಾಗದಿರುವುದು.**– ಪ್ರಾಧಿಕಾರದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು,–

(ಎ) ಪ್ರಾಧಿಕಾರದಲ್ಲಿ ಯಾವುದೇ ಸ್ಥಾನವು ಖಾಲಿಯಿದೆಯೆಂಬ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ನೇಮಕಾತಿಯಲ್ಲಿ ಯಾವುದೇ ದೋಷವಿದೆಯೆಂಬ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಿದ್ದು, ಆದರೆ ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಯಾವುದೇ ಅಕ್ರಮತೆಯಿದೆಯೆಂಬ

– ಕಾರಣಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**8. ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳು.**– (1) ಈ ಅಧಿನಿಯಮದ ಮೇರೆಗೆ, ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಅವಶ್ಯವೆಂದು ಪರಿಗಣಿಸುವಂಥ ಕಾರ್ಯದರ್ಶಿಯನ್ನು ಮತ್ತು ಇತರ ಅಧಿಕಾರಿಗಳನ್ನು ಹಾಗೂ ನೌಕರರನ್ನು ನೇಮಿಸಬಹುದು.

(2) ಪ್ರಾಧಿಕಾರದ ಕಾರ್ಯದರ್ಶಿಯ ಮತ್ತು ಇತರ ಅಧಿಕಾರಿಗಳ ಹಾಗೂ ನೌಕರರ ಸೇವಾ ನಿಬಂಧನೆ ಮತ್ತು ಷರತ್ತುಗಳು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತೆ ಇರತಕ್ಕದ್ದು.

**9. ಸಲಹಾ ಸಮಿತಿಗಳು.**– (1) ಈ ಸಂಬಂಧದಲ್ಲಿ ರಚಿಸಲಾದ ಯಾವುದೇ ನಿಯಮಗಳಿಗೊಳಪಟ್ಟು, ಪ್ರಾಧಿಕಾರವು, ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಅವಶ್ಯವಾಗಬಹುದಾದಂಥ ಸಲಹಾ ಸಮಿತಿಗಳನ್ನು ಕಾಲಕಾಲಕ್ಕೆ ರಚಿಸಬಹುದು.

(2) ಪ್ರತಿಯೊಂದು ಸಲಹಾ ಸಮಿತಿಯು ಹಡಗು ಮೂಲಕ ಸಾಗಣೆ ಮತ್ತು ನೌಕಾ ಸಂಚಾರ ಹಾಗೂ ಅವುಗಳಿಗೆ ಸಂಬಂಧಪಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

**10. ವ್ಯವಹಾರ ತತ್ವಗಳ ಮೇಲೆ ಪ್ರಾಧಿಕಾರವು ಕಾರ್ಯನಿರ್ವಹಿಸುವುದು.**– ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಕಾರ್ಯ ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ವ್ಯವಹಾರ ತತ್ವಗಳನ್ನು ಅನುಸರಿಸತಕ್ಕದ್ದು.

## ಅಧ್ಯಾಯ – III

**ಸ್ವತ್ತು ಮತ್ತು ಕರಾರುಗಳು**

**11. ಕೇಂದ್ರ ಸರ್ಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸುವುದು.**– ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ,–

(ಎ) ಒಳನಾಡು ಜಲ ಸಾರಿಗೆ ನಿರ್ದೇಶನಾಲಯದ ಉದ್ದೇಶಗಳಿಗಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿದ್ದ ಮತ್ತು ಅಂಥ ದಿನಾಂಕದ ನಿಕಟಪೂರ್ವದಲ್ಲಿ ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಮುಖ್ಯ ಇಂಜಿನಿಯರು ಹಾಗೂ ಆಡಳಿತಾಧಿಕಾರಿಯು ನಿರ್ವಹಿಸುತ್ತಿದ್ದ ಎಲ್ಲಾ ಸ್ವತ್ತುಗಳು ಮತ್ತು ಇತರೆ ಆಸ್ತಿಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು;

(ಬಿ) ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಉದ್ದೇಶಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ, ಅಂಥ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು ವಹಿಸಿದ್ದ ಅಥವಾ ಅದರ ಪರವಾಗಿ ವಹಿಸಲಾಗಿದ್ದ ಎಲ್ಲಾ ಋಣಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳು, ಕೇಂದ್ರ ಸರ್ಕಾರದೊಂದಿಗೆ ಮಾಡಿಕೊಂಡ ಎಲ್ಲ ಕರಾರುಗಳು ಅಥವಾ ಅದರ ಪರವಾಗಿ ಮಾಡಿಕೊಳ್ಳಲು ತೊಡಗಿರುವ ಎಲ್ಲ ಕಾರ್ಯಗಳನ್ನು ಪ್ರಾಧಿಕಾರವು ವಹಿಸಿದೆ, ಅದರೊಂದಿಗೆ ಮಾಡಿಕೊಳ್ಳಲಾಗಿದೆ ಅಥವಾ ಅದರ ಪರವಾಗಿ ಮಾಡಿಕೊಳ್ಳಲು ತೊಡಗಿದೆ ಎಂದು ಭಾವಿಸತಕ್ಕದ್ದು;

(ಸಿ) ಒಳನಾಡು ಜಲಸಾರಿಗೆ ನಿರ್ದೇಶನಾಲಯದ ಉದ್ದೇಶಗಳಿಗಾಗಿ ಅಥವಾ ಅವುಗಳ ಸಂಬಂಧದಲ್ಲಿ ಅಂಥ ದಿನದವರೆಗೆ ಕೇಂದ್ರ ಸರ್ಕಾರವು ವಹಿಸಿದ ಎಲ್ಲ ಅನಾವರ್ತಕ ವೆಚ್ಚವನ್ನು ಮತ್ತು ಕೇಂದ್ರ ಸರ್ಕಾರವು ಬಂಡವಾಳ ವೆಚ್ಚವೆಂಬುದಾಗಿ ಘೋಷಿಸಿರುವುದನ್ನು, ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು, ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ಒದಗಿಸಿದ ಬಂಡವಾಳ ಎಂಬುದಾಗಿ ಪರಿಗಣಿಸತಕ್ಕದ್ದು;

(ಡಿ) ಒಳನಾಡು ಜಲಸಾರಿಗೆ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಅಂಥ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಬಾಕಿ ಇದ್ದ ಎಲ್ಲಾ ಹಣದ ಮೊತ್ತಗಳನ್ನು ಪ್ರಾಧಿಕಾರಕ್ಕೆ ಬಾಕಿ ಇರುವ ಹಣದ ಮೊತ್ತಗಳೆಂದು ಭಾವಿಸತಕ್ಕದ್ದು;

(ಇ) ಒಳನಾಡು ಜಲಸಾರಿಗೆ ನಿರ್ದೇಶನಾಲಯಕ್ಕೆ ಸಂಬಂಧಪಟ್ಟ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾಗಿದ್ದು, ಇತ್ಯರ್ಥದಲ್ಲಿ ಬಾಕಿ ಇದ್ದ ಅಥವಾ ಅಂಥ ದಿನಾಂಕದ ನಿಕಟಪೂರ್ವದಲ್ಲಿ ಹಾಗೆ ಹೂಡಬಹುದಾಗಿದ್ದ ಎಲ್ಲಾ ದಾವೆಗಳು ಮತ್ತು ಇತರ ನ್ಯಾಯಿಕ ವ್ಯವಹರಣೆಗಳು, ಅಂಥ ದಿನಾಂಕದಂದು ಅಥವಾ ದಿನಾಂಕದ ತರುವಾಯ ಪ್ರಾಧಿಕಾರವು ಮುಂದುವರಿಸತಕ್ಕದ್ದು ಅಥವಾ ಅದರ ವಿರುದ್ಧ ಮುಂದುವರಿಯತಕ್ಕದ್ದು ಅಥವಾ ಹೂಡತಕ್ಕದ್ದು; ಮತ್ತು

(ಎಫ್) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರದ ಪ್ರಕಾರ್ಯಗಳಿಗೆ ಸುಸಂಗತವಾದಂಥ ಒಳನಾಡು ಜಲಸಾರಿಗೆ ನಿರ್ದೇಶನಾಲಯದ ವ್ಯವಹಾರಗಳಿಗೆ ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಅಂಥ ದಿನದ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಪ್ರತಿಯೊಬ್ಬ ನೌಕರನನ್ನು ಪ್ರಾಧಿಕಾರದಲ್ಲಿ ಪ್ರತಿನಿಯೋಜನೆಯ ಮೇಲಿರುವನೆಂದು ಪರಿಗಣಿಸತಕ್ಕದ್ದು. ಆದರೆ, ಪ್ರಾಧಿಕಾರದಲ್ಲಿ ತನ್ನ ಹುದ್ದೆಯನ್ನು ಸಂಭಾವನೆ, ರಜೆ, ಭವಿಷ್ಯ ನಿಧಿ, ನಿವೃತ್ತಿಯ ಅಥವಾ ಇತರ ಸೇವಾಂತ್ಯ ಪ್ರಯೋಜನಗಳಿಗೆ ಸಂಬಂಧಪಟ್ಟಂತೆ ಪ್ರಾಧಿಕಾರವು ರಚನೆಯಾಗಿರದಿದ್ದರೆ ಅವನು ಯಾವ ಸೇವಾವಧಿ ಮತ್ತು ನಿಬಂಧನೆಗಳು ಹಾಗೂ ಷರತ್ತುಗಳ ಮೇಲೆ ಹುದ್ದೆಯನ್ನು ಧಾರಣ ಮಾಡಿರುತ್ತಿದ್ದನೋ ಅಂಥಹುದೇ ಸೇವಾವಧಿ ಮತ್ತು ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಹುದ್ದೆಯನ್ನು ಧಾರಣ ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರವು ತಾನಾಗಿಯೇ ಅಥವಾ ಪ್ರಾಧಿಕಾರದ ಕೋರಿಕೆಯ ಮೇರೆಗೆ ಅಂಥ ನೌಕರನನ್ನು ತನ್ನ ಸೇವೆಗೆ ಹಿಂದಕ್ಕೆ ಕರೆಯಿಸಿಕೊಳ್ಳುವವರೆಗೆ ಅಥವಾ ಪ್ರಾಧಿಕಾರವು ಕೇಂದ್ರ ಸರ್ಕಾರದ ಸಹಮತಿಯೊಂದಿಗೆ ತನ್ನ ನಿಯತ ಸೇವೆಯಲ್ಲಿ ಅಂಥ ನೌಕರನನ್ನು ಯುಕ್ತವಾಗಿ ಲೀನಗೊಳಿಸುವವರೆಗೆ–ಇವೆರಡರಲ್ಲಿ ಯಾವುದು ಮುಂಚಿತವೋ ಅಲ್ಲಿಯವರೆಗೆ ಅವನು ಹಾಗೆ ಹುದ್ದೆಯನ್ನು ಧಾರಣ ಮಾಡಿರುವುದು ಮುಂದುವರೆಯತಕ್ಕದ್ದು:

ಪರಂತು, ಪ್ರಾಧಿಕಾರದಲ್ಲಿ ಯಾರೇ ಅಂಥ ನೌಕರನು ಪ್ರತಿನಿಯೋಜನೆಯ ಮೇಲಿರುವ ಅವಧಿಯಲ್ಲಿ, ಪ್ರಾಧಿಕಾರವು ಅಂಥ ಪ್ರತಿಯೊಬ್ಬ ನೌಕರನಿಗೆ ಸಂಬಂಧಪಟ್ಟಂತೆ ಅವನ ರಜಾ, ಸಂಬಳ, ನಿವೃತ್ತಿ ವೇತನ ಮತ್ತು ಉಪದಾನ- ಇವುಗಳಿಗಾಗಿ ಕೇಂದ್ರ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ವಂತಿಗೆಯನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಪ್ರಾಧಿಕಾರವು ಯಾವ ನೌಕರನ ಸೇವೆಯನ್ನು ತನ್ನ ನಿಯತ ಸೇವೆಯಲ್ಲಿ ಲೀನಗೊಳಿಸಬೇಕೆಂದು ಉದ್ದೇಶಿಸಿದೆಯೋ ಆ ನೌಕರನು ಆ ಬಗ್ಗೆ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಪ್ರಾಧಿಕಾರದ ನಿಯತ ನೌಕರನಾಗುವುದಿಲ್ಲವೆಂಬ ತನ್ನ ಆಶಯವನ್ನು ತಿಳಿಸಿದಲ್ಲಿ, ಅಂಥ ನೌಕರನನ್ನು ಪ್ರಾಧಿಕಾರವು ತನ್ನ ನಿಯತ ಸೇವೆಯಲ್ಲಿ ಲೀನಗೊಳಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರದ ಯಾವ ಸ್ವತ್ತುಗಳು, ಹಕ್ಕುಗಳು ಅಥವಾ ಹೊಣೆಗಾರಿಕೆಗಳನ್ನು ಪ್ರಾಧಿಕಾರಕ್ಕೆ ವರ್ಗಾಯಿಸಲಾಗಿದೆಯೆಂಬ ಬಗ್ಗೆ ಅಥವಾ ಕೇಂದ್ರ ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಯಾವ ನೌಕರನು ಪ್ರಾಧಿಕಾರದಲ್ಲಿ ಪ್ರತಿನಿಯೋಜನೆಯ ಮೇಲಿದ್ದಾನೆಂದು ಪರಿಗಣಿಸಬೇಕೆಂಬ ಬಗ್ಗೆ ಯಾವುದೇ ವಿವಾದ ಅಥವಾ ಸಂದೇಹ ಉಂಟಾದಲ್ಲಿ, ಅಂಥ ವಿವಾದ ಅಥವಾ ಸಂದೇಹವನ್ನು ಕೇಂದ್ರ ಸರ್ಕಾರವು ಪ್ರಾಧಿಕಾರದೊಂದಿಗೆ ಸಮಾಲೋಚಿಸಿ ತೀರ್ಮಾನಿಸತಕ್ಕದ್ದು ಮತ್ತು ಈ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(3) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಈ ಪ್ರಕರಣದ ಮೇರೆಗೆ ಯಾರೇ ನೌಕರನನ್ನು ಪ್ರಾಧಿಕಾರವು ತನ್ನ ನಿಯತ ಸೇವೆಯಲ್ಲಿ ಲೀನಗೊಳಿಸಿರುವುದು ಆ ಅಧಿನಿಯಮದ ಅಥವಾ ಇತರೆ ಕಾನೂನಿನ ಮೇರೆಗೆ ಯಾವುದೇ ನಷ್ಟ ಪರಿಹಾರವನ್ನು ಪಡೆಯಲು ಅಂಥ ನೌಕರನನ್ನು ಹಕ್ಕುಳ್ಳವನನ್ನಾಗಿಸತಕ್ಕದ್ದಲ್ಲ ಮತ್ತು ಅಂಥ ಯಾವುದೇ ಕ್ಲೇಮನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರವು ಪುರಸ್ಕರಿಸತಕ್ಕದ್ದಲ್ಲ.

**12. ಪ್ರಾಧಿಕಾರವು ಕರಾರುಗಳನ್ನು ಮಾಡಿಕೊಳ್ಳುವುದು.**- 13ನೆಯ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು, ಅವಶ್ಯವಾದ ಯಾವುದೇ ಕರಾರನ್ನು ಮಾಡಿಕೊಳ್ಳಲು ಮತ್ತು ಅದನ್ನು ನೆರವೇರಿಸಲು ಪ್ರಾಧಿಕಾರವು ಸಕ್ಷಮವಾಗಿರತಕ್ಕದ್ದು.

**13. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ನಿರ್ವಹಿಸುವ ವಿಧಾನ.**- (1) ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಪರವಾಗಿ ಪ್ರಾಧಿಕಾರದ ಅಧ್ಯಕ್ಷನು, ಅಥವಾ ಪ್ರಾಧಿಕಾರವು ಈ ಸಂಬಂಧದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಬಹುದಾದಂಥ ಇತರ ಸದಸ್ಯನು ಅಥವಾ ಅಂಥ ಇತರ ಅಧಿಕಾರಿಯು ಮಾಡಿಕೊಳ್ಳತಕ್ಕದ್ದು ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕರಾರುಗಳನ್ನು ಅಥವಾ ಕರಾರುಗಳ ವರ್ಗವನ್ನು ಪ್ರಾಧಿಕಾರದ ಸಾಮಾನ್ಯ ಮುದ್ರೆಯನ್ನು ಹಾಕಿ ಮೊಹರು ಮಾಡತಕ್ಕದ್ದು:

ಪರಂತು, ಈ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಆದೇಶದ ಮೂಲಕ ನಿಗದಿಪಡಿಸಬಹುದಾದಂತಹ ಮೌಲ್ಯ ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರನ್ನು, ಪ್ರಾಧಿಕಾರವು ಮೊದಲೇ ಅದನ್ನು ಅನುಮೋದಿಸಿದ್ದ ಹೊರತು ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಸ್ಥಿರ ಸ್ವತ್ತನ್ನು ಆರ್ಜಿಸಲು ಅಥವಾ ಮಾರಾಟ ಮಾಡಲು ಮತ್ತು ಮೂವತ್ತು ವರ್ಷಗಳಿಗೆ ಮೀರುವ ಅವಧಿಗಾಗಿ ಅಂಥ ಸ್ವತ್ತನ್ನು ಗುತ್ತಿಗೆಗೆ ಕೊಡುವ ಯಾವುದೇ ಕರಾರನ್ನು ಮತ್ತು ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ಆದೇಶದ ಮೂಲಕ ಕಾಲಕಾಲಕ್ಕೆ ನಿಗದಿಪಡಿಸಬಹುದಾದಂಥ ಮೌಲ್ಯ ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರನ್ನು, ಕೇಂದ್ರ ಸರ್ಕಾರವು ಮೊದಲೇ ಅದನ್ನು ಅನುಮೋದಿಸಿದ್ದ ಹೊರತು ಮಾಡಿಕೊಳ್ಳತಕ್ಕದ್ದಲ್ಲ.

(2) (1)ನೇಯ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಮಾಡಿಕೊಳ್ಳತಕ್ಕ ಯಾವುದೇ ಕರಾರಿನ ರೀತಿ ಮತ್ತು ವಿಧಾನವು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಈ ಅಧಿನಿಯಮದ ಮತ್ತು ವಿನಿಯಮಗಳ ಉಪಬಂಧಗಳಿಗನುಸಾರವಾಗಿ ಇಲ್ಲದಿರುವ ಯಾವುದೇ ಕರಾರು ಪ್ರಾಧಿಕಾರದ ಮೇಲೆ ಬಂಧನಕಾರಿಯಾಗಿರತಕ್ಕದ್ದಲ್ಲ.

## ಅಧ್ಯಾಯ – IV

## ಪ್ರಾಧಿಕಾರದ ಪ್ರಕಾರ್ಯಗಳು ಮತ್ತು ಅಧಿಕಾರಗಳು

**14. ಪ್ರಾಧಿಕಾರದ ಪ್ರಕಾರ್ಯಗಳು.**– (1) ಪ್ರಾಧಿಕಾರವು,–

(ಎ) ಹಡಗು ಮೂಲಕ ಸಾಗಣೆ ಮತ್ತು ನೌಕಾ ಸಂಚಾರಕ್ಕಾಗಿ ರಾಷ್ಟ್ರೀಯ ಜಲಮಾರ್ಗಗಳ ಮತ್ತು ಅದಕ್ಕೆ ಹೊಂದಿಕೊಂಡಿರುವ ಭೂಮಿಯ ಅಭಿವೃದ್ಧಿ ನಿರ್ವಹಣೆ ಮತ್ತು ಉತ್ತಮ ಉಪಯೋಗಕ್ಕಾಗಿ ಸಮೀಕ್ಷೆಗಳನ್ನು ಮತ್ತು ಅನ್ವೇಷಣೆಗಳನ್ನು ನಡೆಸಬಹುದು ಮತ್ತು ಈ ಸಂಬಂಧದಲ್ಲಿ ಯೋಜನೆಗಳನ್ನು ಸಿದ್ಧಪಡಿಸಬಹುದು;

(ಬಿ) ರಾಷ್ಟ್ರೀಯ ಜಲಮಾರ್ಗಗಳಿಗಾಗಿ ಮೂಲಪರಿಕರ ಸೌಲಭ್ಯಗಳನ್ನು ಒದಗಿಸುವುದು ಅಥವಾ ಅವುಗಳ ವ್ಯವಸ್ಥೆಗೆ ಅನುಮತಿಸಬಹುದು;

(ಸಿ) ಹಡಗು ಮೂಲಕ ಮತ್ತು ನೌಕಾ ಸಂಚಾರದ ಸುರಕ್ಷೆ ಮತ್ತು ಅನುಕೂಲಕ್ಕಾಗಿ ಮತ್ತು ರಾಷ್ಟ್ರೀಯ ಜಲಮಾರ್ಗಗಳ ಸುಧಾರಣೆಗಾಗಿ ಸಂರಕ್ಷಣಾ ಕ್ರಮಗಳನ್ನು ಮತ್ತು ತರಬೇತಿ ಕಾರ್ಯಗಳನ್ನು ಕೈಗೊಳ್ಳಬಹುದು ಹಾಗೂ ಅವಶ್ಯವಿರುವ ಎಲ್ಲ ಇತರ ಕಾರ್ಯಗಳನ್ನು ಮಾಡಬಹುದು;

(ಡಿ) ಸುರಕ್ಷಿತವಾಗಿ ಮತ್ತು ದಕ್ಷ ರೀತಿಯ ಹಡಗು ಮೂಲಕ ಸಾಗಣೆ ಮತ್ತು ನೌಕಾ ಸಂಚಾರಕ್ಕೆ ನೌಕಾಸಂಚಾರ ಯೋಗ್ಯ ಮಾರ್ಗಗಳ ನಿರ್ವಹಣೆ, ನದಿ ಸಂಬಂಧಿತ ತರಬೇತಿ ಮತ್ತು ಸಂರಕ್ಷಣಾ ಕ್ರಮಗಳು– ಇವುಗಳಿಗೆ ಬಾಧಕ ಉಂಟುಮಾಡಬಹುದಾದಷ್ಟರ ಮಟ್ಟಿಗಿನ ಚಟುವಟಿಕೆಗಳನ್ನು ಎಂದರೆ, ರಾಷ್ಟ್ರೀಯ ಜಲಮಾರ್ಗಗಳ ಮತ್ತು ಅದಕ್ಕೆ ಹೊಂದಿಕೊಂಡಿರುವ ಭೂಮಿಯ ತಳದಲ್ಲಿ ಕಸ ಎಸೆಯುವುದು, ಅಲ್ಲಿ ಸಾಮಗ್ರಿಗಳನ್ನು ರಾಶಿ ಹಾಕುವುದು ಅಥವಾ ಅಲ್ಲಿಂದ ಅವುಗಳನ್ನು ತೆಗೆಯುವುದು

– ಇವುಗಳನ್ನು ನಿಯಂತ್ರಿಸಬಹುದು;

(ಇ) ರಾಷ್ಟ್ರೀಯ ಜಲಮಾರ್ಗಗಳು ಮತ್ತು ಅವಕ್ಕೆ ಹೊಂದಿಕೊಂಡಿರುವ ಭೂಮಿಯಲ್ಲಿ ಸುರಕ್ಷಿತ ನೌಕಾ ಸಂಚಾರಕ್ಕೆ ಅಡ್ಡಿಯುಂಟು ಮಾಡಬಹುದಾದ ಅಥವಾ ಮೂಲ ಪರಿಕರ ಸೌಲಭ್ಯಗಳಿಗೆ ಅಥವಾ ಸಂರಕ್ಷಣಾ ಕ್ರಮಗಳ ಸುರಕ್ಷತೆಗೆ ಅಪಾಯ ಉಂಟುಮಾಡಬಹುದಾದಂಥ ಯಾವುದೇ ಅಡ್ಡಿ ಅಥವಾ ಅಡಚಣೆಯನ್ನು, ಕಾನೂನುಬದ್ಧವಾಗಿ ಮಾಡಿರುವಲ್ಲಿ ಅಥವಾ ಅವು ದೀರ್ಘಕಾಲದಿಂದ ಮುಂದುವರಿದಿರುವ ಕಾರಣದಿಂದ ಅಥವಾ ಅನ್ಯಥಾ ಕಾನೂನುಬದ್ಧವಾಗಿರುವಲ್ಲಿ, ಅವುಗಳನ್ನು ತೆಗೆದು ಹಾಕುವುದರಿಂದ ಅಥವಾ ವ್ಯತ್ಯಾಸಗೊಳಿಸುವುದರಿಂದ ಹಾನಿಗೊಳಗಾಗುವ ವ್ಯಕ್ತಿಗೆ ನಷ್ಟ ಪರಿಹಾರವನ್ನು ನೀಡಿದ ತರುವಾಯ, ಅಂಥ ಅಡ್ಡಿ ಅಥವಾ ಅಡಚಣೆಗಳನ್ನು ನಿವಾರಿಸಬಹುದು ಅಥವಾ ಬದಲಿಸಬಹುದು;

(ಎಫ್) ರಾಷ್ಟ್ರೀಯ ಜಲಮಾರ್ಗಗಳ ಮೇಲೆ ನೌಕಾಸಂಚಾರ ಮತ್ತು (ರಸ್ತೆಯ ನಿಯಮವೂ ಸೇರಿದಂತೆ) ಸಂಚಾರ ನಿಯಂತ್ರಣದ ವ್ಯವಸ್ಥೆ ಕಲ್ಪಿಸಬಹುದು;

(ಜಿ) ರಾಷ್ಟ್ರೀಯ ಜಲಮಾರ್ಗಗಳ ಮೇಲೆ ಅಥವಾ ಅವುಗಳಿಗೆ ಅಡ್ಡವಾಗಿ ಅಥವಾ ಅವುಗಳ ಕೆಳಗೆ ರಚನೆಗಳನ್ನು ನಿರ್ಮಿಸುವುದನ್ನು ಅಥವಾ ಬದಲಾಯಿಸುವುದನ್ನು ನಿಯಂತ್ರಿಸಬಹುದು;

(ಹೆಚ್) ರಾಷ್ಟ್ರೀಯ ಜಲಮಾರ್ಗಗಳ ಬಗ್ಗೆ ನೌಕಾ ಸಂಚಾರಕ್ಕೆ ಸಂಬಂಧಿಸಿದ ಹವಾಮಾನ ಮಾಹಿತಿಯನ್ನು ಪ್ರಸಾರ ಮಾಡಬಹುದು;

(ಐ) ರಾಷ್ಟ್ರೀಯ ಜಲಮಾರ್ಗಗಳ ಮೇಲಣ ಒಳನಾಡು ಜಲಸಾರಿಗೆಯನ್ನು ಇತರ ರೀತಿಯ ಸಾರಿಗೆಯೊಂದಿಗೆ ಸಮನ್ವಯಗೊಳಿಸಬಹುದು;

(ಜೆ) ರಾಷ್ಟ್ರೀಯ ಜಲಮಾರ್ಗಗಳ ಮೇಲೆ ಪೈಲಟಿಜ್ ವ್ಯವಸ್ಥೆಯನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) ಇವುಗಳ ಜೊತೆಗೆ ಪ್ರಾಧಿಕಾರವು,-

(ಎ) ಒಳನಾಡು ಜಲಸಾರಿಗೆಗೆ ಸಂಬಂಧಪಟ್ಟ ವಿಷಯಗಳ ಮೇಲೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಬಹುದು;

(ಬಿ) ಒಳನಾಡು ಜಲಸಾರಿಗೆಯನ್ನು ಇತರ ರೀತಿಯ ಸಾರಿಗೆಯೊಂದಿಗೆ ಸಮನ್ವಯಗೊಳಿಸುವ ದೃಷ್ಟಿಯಿಂದ ಸಾರಿಗೆಯ ಅಗತ್ಯತೆಗಳ ಬಗ್ಗೆ ಅಧ್ಯಯನ ನಡೆಸಬಹುದು;

(ಸಿ) ಜಲರಾಶಿ ವಿವರಣ ಸಮೀಕ್ಷೆಯನ್ನು ಕೈಗೊಳ್ಳಬಹುದು ಮತ್ತು ನದಿ ನಕಾಶೆಗಳನ್ನು ಪ್ರಕಟಿಸಬಹುದು;

(ಡಿ) ಒಳನಾಡು ಜಲಸಾರಿಗೆ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಪರಸ್ಪರ ಒಪ್ಪಿಕೊಳ್ಳಬಹುದಾದಂಥ ನಿಬಂಧನೆ ಮತ್ತು ಷರತ್ತುಗಳ ಮೇಲೆ ಯಾವುದೇ ರಾಜ್ಯ ಸರ್ಕಾರಕ್ಕೆ ನೆರವು ನೀಡಬಹುದು;

(ಇ) ಭಾರತ ಮತ್ತು ಹೊರದೇಶಗಳಲ್ಲಿ ಹಡಗು ಸಾಗಣೆ ಮತ್ತು ನೌಕಾ ಸಂಚಾರಕ್ಕಾಗಿ ಯಾವುದೇ ಸೌಲಭ್ಯದ ಜಲಮಾರ್ಗಗಳು ಅಥವಾ ಅಲ್ಲಿರುವ ಯೋಜನೆ ಮತ್ತು ಅಭಿವೃದ್ಧಿಯ ಸಂಬಂಧದಲ್ಲಿ ಪರಸ್ಪರ ಒಪ್ಪಿಕೊಳ್ಳಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಸಮಾಲೋಚನಾ ಸೇವೆಗಳನ್ನು ಅಭಿವೃದ್ಧಿಗೊಳಿಸಬಹುದು ಮತ್ತು ಅಂಥ ಸೇವೆಗಳನ್ನು ಒದಗಿಸಬಹುದು;

(ಎಫ್) ದೋಣಿ ವಿನ್ಯಾಸ, ನಾಡದೋಣಿಗಳ ಯಾಂತ್ರೀಕರಣ, ಎಳೆಯುವ ತಂತ್ರ, ಇಳಿದಾಣ ಮತ್ತು ಮಾರ್ಗಾಂತ ನಿಲ್ದಾಣ ಸೌಲಭ್ಯಗಳು, ಬಂದರು ಸ್ಥಾಪನೆ ಮತ್ತು ಸಮೀಕ್ಷಾ ತಂತ್ರ- ಇವುಗಳ ಅಭಿವೃದ್ಧಿಯೂ ಸೇರಿದಂತೆ ಒಳನಾಡು ಜಲಸಾರಿಗೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಸಂಶೋಧನೆ ನಡೆಸಬಹುದು;

(ಜಿ) ಒಳನಾಡು ಜಲಮಾರ್ಗಗಳ ವರ್ಗೀಕರಣಕ್ಕಾಗಿ ಮಾನಕಗಳನ್ನು ನಿರ್ಧರಿಸಬಹುದು;

(ಹೆಚ್) ಒಳನಾಡು ಜಲಸಾರಿಗೆ ಸಿಬ್ಬಂದಿಗಾಗಿ ದೇಶದೊಳಗೆ ಮತ್ತು ದೇಶದ ಹೊರಗೆ ತಾಂತ್ರಿಕ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಬಹುದು;

(ಐ) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದಂಥ ಇತರೆ ಪ್ರಕಾರ್ಯಗಳನ್ನು ನೆರವೇರಿಸಬಹುದು.

(3) (1)ನೆಯ ಪ್ರಕರಣದ (ಇ) ಖಂಡದಲ್ಲಿ ಉಲ್ಲೇಖಿಸಲಾದ ನಷ್ಟಪರಿಹಾರದಿಂದಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿವಾದವನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಅಗತ್ಯವಾಗಿರುವ ಭೂಮಿಯ ಸಂದರ್ಭದಲ್ಲಿ ಅಂಥಹುದೇ ವಿವಾದಗಳಿಗೆ ಸಂಬಂಧಿಸಿದ ಕಾನೂನಿಗೆ ಅನುಸಾರವಾಗಿ ನಿರ್ಧರಿಸತಕ್ಕದ್ದು.

(4) ನಿಯಮಿಸಬಹುದಾದ ಮೊತ್ತವನ್ನು ಮೀರುವ ಬಂಡವಾಳ ವೆಚ್ಚವನ್ನು ಒಳಗೊಂಡಿರುವ ಮತ್ತು (1) ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ, ಪ್ರಾಧಿಕಾರವು ಸಿದ್ಧಪಡಿಸಿದ ಪ್ರತಿಯೊಂದು ಯೋಜನೆಯನ್ನು ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(5) ಕೇಂದ್ರ ಸರ್ಕಾರವು (4)ನೆಯ ಉಪಪ್ರಕರಣದ ಮೇರೆಗೆ ತನಗೆ ಸಲ್ಲಿಸಲಾದ ಯೋಜನೆಯನ್ನು ಮಾರ್ಪಾಟು ಮಾಡದೇ ಅಥವಾ ತಾನು ಅವಶ್ಯವೆಂದು ಪರಿಗಣಿಸಬಹುದಾದ ಮಾರ್ಪಾಟುಗಳೊಂದಿಗೆ ಅನುಮೋದಿಸಬಹುದು ಅಥವಾ ತಿರಸ್ಕರಿಸಬಹುದು ಮತ್ತು ತಾನು ನೀಡುವ ನಿರ್ದೇಶನಗಳಿಗನುಸಾರ ಹೊಸ ಯೋಜನೆಯನ್ನು ಸಿದ್ಧಪಡಿಸುವಂತೆ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

**15. ಯೋಜನೆಗಳ ತಿದ್ದುಪಡಿ.**- 14ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅನುಮೋದಿಸಲಾದ ಯೋಜನೆಯಲ್ಲಿ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ ಯಾವುದೇ ಮುಖ್ಯ ಬದಲಾವಣೆಯನ್ನು ಪ್ರಾಧಿಕಾರವು ಮಾಡತಕ್ಕದ್ದಲ್ಲ.

**ವಿವರಣೆ**.- ಈ ಪ್ರಕರಣದ ಉದ್ದೇಶಗಳಿಗಾಗಿ "ಮುಖ್ಯ ಬದಲಾವಣೆ" ಎಂದರೆ ಯೋಜನೆಯ ವೆಚ್ಚದಲ್ಲಿ ಆ ವೆಚ್ಚದ ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಾಗಿರುವುದು ಅಥವಾ ಪ್ರಯೋಜನ ಮತ್ತು ಖರ್ಚಿನ ಅನುಪಾತದಲ್ಲಿ ವೆಚ್ಚದ ಭಾಗವು ಪ್ರಯೋಜನಾ ಭಾಗಕ್ಕಿಂತ ಶೇಕಡಾ ಇಪ್ಪತ್ತರಷ್ಟನ್ನು ಮೀರುವಂತೆ ಮಾಡುವ ಅಥವಾ ಪ್ರಯೋಜನಾ ಭಾಗವನ್ನು ಶೇಕಡಾ ಇಪ್ಪತ್ತಕ್ಕಿಂತ ಹೆಚ್ಚಾಗಿ ಕಡಿಮೆ ಮಾಡುವ ಬದಲಾವಣೆ.

**16**. [1944ರ ಅಧಿನಿಯಮ ಸಂಖ್ಯೆ 8ರ 2ನೇ ಪ್ರಕರಣದ ಮೂಲಕ ಬಿಟ್ಟುಬಿಡಲಾಗಿದೆ.]

## ಅಧ್ಯಾಯ – V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**17. ಫೀಜು ಮತ್ತು ವೆಚ್ಚಗಳನ್ನು ವಿಧಿಸುವುದು ಮತ್ತು ವಸೂಲಿ ಮಾಡುವುದು.**- (1) ಪ್ರಾಧಿಕಾರವು, ಕೇಂದ್ರ ಸರ್ಕಾರದ ಪೂರ್ವ ಅನುಮೋದನೆ ಪಡೆದು, ಪ್ರಯಾಣಿಕರ ಸೌಲಭ್ಯಗಳು ಮತ್ತು ನೌಕೆಗಳು ನಿಲ್ಲುವುದು, ಸರಕುಗಳ ನಿರ್ವಹಣೆ ಮತ್ತು ಸರಕುಗಳ ದಾಸ್ತಾನು ಇವುಗಳಿಗೆ ಸಂಬಂಧಿಸಿದ ಸೌಲಭ್ಯಗಳೂ ಸೇರಿದಂತೆ ಹಡಗು ಸಾಗಣೆ, ನೌಕಾ ಸಂಚಾರ, ಮೂಲಪರಿಕರ ಸೌಲಭ್ಯಗಳ ಉದ್ದೇಶಗಳಿಗಾಗಿ ರಾಷ್ಟ್ರೀಯ ಜಲಮಾರ್ಗಗಳ ಬಳಕೆಗೆ ಸಂಬಂಧಿಸಿದಂತೆ ಒದಗಿಸಿದ ಸೇವೆ ಮತ್ತು ಪ್ರಯೋಜನಗಳ ಬಗ್ಗೆ ಈ ಸಂಬಂಧದಲ್ಲಿ ವಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ದರಗಳಲ್ಲಿ ಫೀಜು ಮತ್ತು ಚಾರ್ಜುಗಳನ್ನು ವಿಧಿಸಬಹುದು.

(2) (1)ನೆಯ ಉಪಪ್ರಕರಣದ ಮೇರೆಗೆ ವಿಧಿಸಲಾದ ಫೀಜು ಮತ್ತು ವೆಚ್ಚಗಳನ್ನು ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತಹ ರೀತಿಯಲ್ಲಿ ವಸೂಲಿ ಮಾಡತಕ್ಕದ್ದು.

**18. ಕೇಂದ್ರ ಸರ್ಕಾರದಿಂದ ಅನುದಾನಗಳು ಮತ್ತು ಸಾಲಗಳು.**- ಸಂಸತ್ತು ಈ ಸಂಬಂಧದಲ್ಲಿ, ಕಾನೂನಿನ ಮೂಲಕ ಯುಕ್ತವಾಗಿ ನಿಗದಿಪಡಿಸಿದ ತರುವಾಯ, ಕೇಂದ್ರ ಸರ್ಕಾರವು, ಅವಶ್ಯವೆಂದು ಪರಿಗಣಿಸಬಹುದಾದಂಥ ಹಣದ ಮೊತ್ತವನ್ನು ಪ್ರಾಧಿಕಾರಕ್ಕೆ ಅನುದಾನಗಳು ಮತ್ತು ಸಾಲಗಳಾಗಿ ನೀಡಬಹುದು.

**18ಎ. ಪ್ರಾಧಿಕಾರದ ಸಾಲ ಪಡೆಯುವ ಅಧಿಕಾರಗಳು.**- ಪ್ರಾಧಿಕಾರವು, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು, ಅಧಿನಿಯಮದಡಿಯಲ್ಲಿ ಅದರ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಅದು ಸೂಕ್ತವೆಂದು ಭಾವಿಸಬಹುದಾದಂತೆ ಬಂಧಪತ್ರಗಳು, ಡಿಬೆಂಚರುಗಳು ಅಥವಾ ಇತರ ಲಿಖಿತಗಳ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲ ಪಡೆಯಬಹುದು.

**19. ನಿಧಿಯ ರಚನೆ.**- (1) ಭಾರತ ಒಳನಾಡು ಜಲಮಾರ್ಗಗಳ ಪ್ರಾಧಿಕಾರದ ನಿಧಿಯೆಂದು ಕರೆಯಲಾಗುವ ಒಂದು ನಿಧಿಯನ್ನು ರಚಿಸತಕ್ಕದ್ದು ಮತ್ತು ಅದಕ್ಕೆ ಈ ಮುಂದಿನವುಗಳನ್ನು ಜಮೆ ಮಾಡತಕ್ಕದ್ದು:-

(ಎ) 18ನೇ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಪ್ರಾಧಿಕಾರಕ್ಕೆ ನೀಡಿದ ಯಾವುದೇ ಅನುದಾನಗಳು ಮತ್ತು ಸಾಲಗಳು;

(ಬಿ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ಸ್ವೀಕರಿಸಿದ ಎಲ್ಲ ಫೀಜು ಮತ್ತು ಚಾರ್ಜುಗಳು; ಮತ್ತು

(ಸಿ) ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ಇತರ ಮೂಲಗಳಿಂದ ಪ್ರಾಧಿಕಾರವು ಸ್ವೀಕರಿಸಿದ ಎಲ್ಲ ಮೊತ್ತಗಳು;

(2) ನಿಧಿಯನ್ನು,-

(ಎ) ಪ್ರಾಧಿಕಾರದ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳ, ಭತ್ಯೆಗಳು ಮತ್ತು ಇತರ ಸಂಭಾವನೆ;

(ಬಿ) 14ನೇ ಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ವಹಿಸಿದ ವೆಚ್ಚಗಳು; ಮತ್ತು

(ಸಿ) ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಗುರಿ ಮತ್ತು ಉದ್ದೇಶಗಳ ಈಡೇರಿಕೆಗೆ ತಗಲುವ ವೆಚ್ಚಗಳು

– ಇವುಗಳನ್ನು ಭರಿಸುವುದಕ್ಕಾಗಿ ಬಳಸತಕ್ಕದ್ದು.

**20. ಬಡ್ಜೆಟ್.–** ಪ್ರಾಧಿಕಾರವು ಪ್ರತಿ ಹಣಕಾಸು ವರ್ಷಕ್ಕಾಗಿ ನಿಯಮಿಸಬಹುದಾದಂಥ ನಮೂನೆ ಮತ್ತು ಸಮಯದಲ್ಲಿ ತನ್ನ ಮುಂದಿನ ಹಣಕಾಸು ವರ್ಷದ ಅಂದಾಜು ಜಮೆಗಳು ಮತ್ತು ವೆಚ್ಚವನ್ನು ತೋರಿಸುವ ಬಡ್ಜೆಟ್‌ನ್ನು ತಯಾರಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿಕೊಡತಕ್ಕದ್ದು.

**21. ನಿಧಿಗಳ ಹೂಡಿಕೆ.–** ಪ್ರಾಧಿಕಾರವು, ತನ್ನ ನಿಧಿಗಳನ್ನು (ಯಾವುದೇ ಮೀಸಲಿಟ್ಟ ನಿಧಿಯೂ ಸೇರಿದಂತೆ) ಕೇಂದ್ರ ಸರ್ಕಾರದ ಭದ್ರತೆಗಳಲ್ಲಿ ಅಥವಾ ನಿಯಮಿಸಬಹುದಾದಂಥ ಇತರೆ ರೀತಿಯಲ್ಲಿ ಹೂಡಬಹುದು.

**22. ವಾರ್ಷಿಕ ವರದಿ.–** ಪ್ರಾಧಿಕಾರವು, ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಸಮಯದಲ್ಲಿ ಹಿಂದಿನ ಹಣಕಾಸು ವರ್ಷದ ತನ್ನ ಚಟುವಟಿಕೆಗಳ ಪೂರ್ಣ ವಿವರವನ್ನು ನೀಡುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

**23. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** ಪ್ರಾಧಿಕಾರದ ಲೆಕ್ಕಪತ್ರಗಳನ್ನು, ಭಾರತದ ಲೆಕ್ಕ ನಿಯಂತ್ರಕ ಮತ್ತು ಲೆಕ್ಕ ಪರಿಶೋಧಕನೊಡನೆ ಸಮಾಲೋಚಿಸಿ ನಿಯಮಿಸಬಹುದಾದಂಥ ರೀತಿಯಲ್ಲಿ ಇಡತಕ್ಕದ್ದು ಮತ್ತು ಪರಿಶೋಧಿಸತಕ್ಕದ್ದು ಮತ್ತು ಪ್ರಾಧಿಕಾರವು ತನ್ನ ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯನ್ನು ಪರಿಶೋಧಕರು ಅದರ ಮೇಲೆ ನೀಡಿದ ವರದಿಯೊಂದಿಗೆ ನಿಯಮಿಸಬಹುದಾದಂಥ ದಿನಾಂಕಕ್ಕಿಂತ ಮುಂಚಿತವಾಗಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

**24. ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಸಂಸತ್ತಿನ ಮುಂದೆ ಇಡುವುದು.–** ಕೇಂದ್ರ ಸರ್ಕಾರವು, ವಾರ್ಷಿಕ ವರದಿಯನ್ನು ಮತ್ತು ಲೆಕ್ಕಪರಿಶೋಧಕರ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅವುಗಳನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ - VI

### ಸಂಕೀರ್ಣ

**25. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಹಿಂದೆ ಹೇಳಿದ ಈ ಅಧಿನಿಯಮದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕಾರ್ಯನೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ತನಗೆ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ಕೊಡುವುದಕ್ಕೆ ಮುಂಚೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಪ್ರಾಧಿಕಾರಕ್ಕೆ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ಒಂದು ಅವಕಾಶವನ್ನು ಕೊಡತಕ್ಕದ್ದು.

(2) ವಿಷಯವು ಕಾರ್ಯನೀತಿಗೆ ಸಂಬಂಧಿಸಿದ್ದಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**26. ಪ್ರಾಧಿಕಾರಕ್ಕಾಗಿ ಭೂಮಿಯ ಕಡ್ಡಾಯ ಆರ್ಜನೆ.–** ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾಗಿರುವ ಭೂಮಿಯನ್ನು, ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುವ ಭೂಮಿಯೆಂದು ಭಾವಿಸತಕ್ಕದ್ದು ಮತ್ತು ಅಂಥ ಭೂಮಿಯನ್ನು ಭೂ ಆರ್ಜನೆ ಅಧಿನಿಯಮ, 1894 (1894ರ 1)ರ ಉಪಬಂಧಗಳ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಸಂವಾದಿ ಕಾನೂನಿನ ಮೇರೆಗೆ ಪ್ರಾಧಿಕಾರಕ್ಕಾಗಿ ಆರ್ಜಿಸಬಹುದು.

**27. ಕೆಲವು ಕಾನೂನುಗಳ ಅನ್ವಯ, ಇತ್ಯಾದಿ.–** (1) ಈ ಅಧಿನಿಯಮದ ಉಪಬಂಧಗಳು ಭಾರತೀಯ ಬಂದರುಗಳ ಅಧಿನಿಯಮ, 1908 (1908ರ 15)ರ ಮತ್ತು ದೊಡ್ಡ ಬಂದರು ನ್ಯಾಸಗಳ ಅಧಿನಿಯಮ, 1963

(1963ರ 38)ರ ಉಪಬಂಧಗಳ ಜೊತೆಗೆ ಇರತಕ್ಕದ್ದು ಮತ್ತು ವಿಶೇಷವಾಗಿ ಈ ಅಧಿನಿಯಮದಲ್ಲಿ ಇರುವುದು ಯಾವುದೂ,-

(ಎ) ಯಾವುದೇ ಬಂದರಿನ ಸಂರಕ್ಷಣಾಧಿಕಾರಿ ಅಥವಾ ಭಾರತೀಯ ಬಂದರುಗಳ ಅಧಿನಿಯಮ, 1908 (1908ರ 15)ರ ಮೇರೆಗೆ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರವು; ಅಥವಾ

(ಬಿ) ಯಾವುದೇ ದೊಡ್ಡ ಬಂದರಿನ ನ್ಯಾಸಧಾರಿ ಮಂಡಲಿ ಅಥವಾ ದೊಡ್ಡ ಬಂದರು ನ್ಯಾಸ ಅಧಿನಿಯಮ, 1963 (1963ರ 38)ರ ಮೇರೆಗೆ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರವು –

ಅಂಥ ಬಂದರು ಅಥವಾ ದೊಡ್ಡ ಬಂದರಿನ ಪರಿಮಿತಿಗಳೊಳಗೆ ಬರುವಂಥ (ರಾಷ್ಟ್ರೀಯ ಜಲಮಾರ್ಗವೂ ಸೇರಿದಂತೆ) ಒಳನಾಡು ಜಲಮಾರ್ಗಗಳ ಯಾವುದೇ ಭಾಗದಲ್ಲಿ ಅಥವಾ ಅದರ ಭಾಗದ ಸಂಬಂಧದಲ್ಲಿ ಚಲಾಯಿಸಬೇಕಾಗಿರುವ, ನೆರವೇರಿಸಬೇಕಾಗಿರುವ ಅಥವಾ ನಿರ್ವಹಿಸಬೇಕಾಗಿರುವ ಯಾವುದೇ ಅಧಿಕಾರವ್ಯಾಪ್ತಿ, ಪ್ರಕಾರ್ಯಗಳು, ಅಧಿಕಾರಗಳು ಅಥವಾ ಕರ್ತವ್ಯಗಳು

– ಇವುಗಳಿಗೆ ಬಾಧಕವುಂಟುಮಾಡತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಇರುವುದು ಯಾವುದೂ, ರಾಷ್ಟ್ರೀಯ ಜಲಮಾರ್ಗಗಳ ಮೇಲೆ ಹಡಗು ಮೂಲಕ ಸಾಗಣೆ ಮತ್ತು ನೌಕಾ ಸಂಚಾರಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಒಳನಾಡು ಹಡಗುಗಳ ಅಧಿನಿಯಮ, 1917 (1917ರ 1) ಅಥವಾ ಭಾರತೀಯ ಬಂದರುಗಳ ಅಧಿನಿಯಮ, 1908 (1908ರ 15) ಮತ್ತು ದೊಡ್ಡ ಬಂದರು ನ್ಯಾಸಗಳ ಅಧಿನಿಯಮ, 1963 (1963ರ 38)ನ್ನು ಹೊರತುಪಡಿಸಿ, ಯಾವುದೇ ಇತರ ಕೇಂದ್ರ ಅಧಿನಿಯಮ ಅಥವಾ ಯಾವುದೇ ರಾಜ್ಯ ಅಥವಾ ಪ್ರಾಂತೀಯ ಅಧಿನಿಯಮದ ಪ್ರವರ್ತನೆಗೆ ಬಾಧಕವಾಗತಕ್ಕದ್ದಲ್ಲ.

**28. ಪ್ರವೇಶಾಧಿಕಾರ.**- ಈ ಸಂಬಂಧದಲ್ಲಿ ರಚಿಸಲಾದ ಯಾವುದೇ ನಿಯಮಗಳಿಗೆ ಒಳಪಟ್ಟು, ಪ್ರಾಧಿಕಾರವು ಈ ಸಂಬಂಧದಲ್ಲಿ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಸೂಕ್ತ ಸಮಯದೊಳಗೆ ಯಾವುದೇ ಭೂಮಿ ಅಥವಾ ಕಟ್ಟಡದೊಳಗೆ ಪ್ರವೇಶಿಸುವುದು ಅವಶ್ಯವೆಂದು ಕಂಡುಬಂದಾಗಲೆಲ್ಲಾ ಹಾಗೆ ಪ್ರವೇಶಿಸಬಹುದು; ಮತ್ತು

(ಎ) ಯಾವುದೇ ಪರಿಶೀಲನೆ, ಸಮೀಕ್ಷೆ, ಅಳತೆ, ಮೌಲ್ಯ ನಿರ್ಣಯ ಅಥವಾ ವಿಚಾರಣೆ ಮಾಡಬಹುದು;

(ಬಿ) ಮಟ್ಟಗಳನ್ನು ತೆಗೆದುಕೊಳ್ಳಬಹುದು;

(ಸಿ) ಮಣ್ಣಿನ ಕೆಳ ಪದರದಲ್ಲಿ ಅಗೆಯಬಹುದು ಅಥವಾ ಕೊರೆಯಬಹುದು;

(ಡಿ) ಕೆಲಸದ ಎಲ್ಲೆಗಳನ್ನು ಮತ್ತು ಉದ್ದೇಶಿತ ರೇಖೆಗಳನ್ನು ಗುರುತಿಸಬಹುದು;

(ಇ) ಗುರುತುಗಳನ್ನು ಇಟ್ಟು ಮತ್ತು ಕಂದಕಗಳನ್ನು ತೋಡಿ, ಅಂಥ ಮಟ್ಟದ ಎಲ್ಲೆಗಳನ್ನು ಮತ್ತು ರೇಖೆಗಳನ್ನು ಗುರುತು ಮಾಡಬಹುದು;

(ಎಫ್) ನಿಯಮಿಸಬಹುದಾದಂಥ ಇತರೆ ಕಾರ್ಯಗಳನ್ನು ಅಥವಾ ಕೃತ್ಯಗಳನ್ನು ಮಾಡಬಹುದು:

ಪರಂತು, ಅಂಥ ವ್ಯಕ್ತಿಯು ಯಾವುದೇ ಕಟ್ಟಡಕ್ಕೆ ಅಥವಾ ಅದಕ್ಕೆ ಲಗತ್ತಾಗಿರುವ ಯಾವುದೇ ಅಂಗಳಕ್ಕೆ ಅಥವಾ ವಾಸದ ಮನೆಗೆ ಹೊಂದಿಕೊಂಡಿರುವ ತೋಟದೊಳಗೆ (ಅದರ ಅನುಭವದಾರನ ಒಪ್ಪಿಗೆ ಇದ್ದ ಹೊರತು) ಹಾಗೆ ಪ್ರವೇಶಿಸುವ ತನ್ನ ಉದ್ದೇಶದ ಬಗ್ಗೆ ಕನಿಷ್ಠ ಪಕ್ಷ ಇಪ್ಪತ್ತನಾಲ್ಕು ಗಂಟೆಗಳ ನೋಟೀಸನ್ನು ಮುಂಚಿತವಾಗಿ ಅಂಥ ಅನುಭವದಾರನಿಗೆ ಕೊಟ್ಟಿಲ್ಲದೆ ಹಾಗೆ ಪ್ರವೇಶ ಮಾಡತಕ್ಕದ್ದಲ್ಲ.

**29. ಅಧಿಕಾರಗಳ ಪ್ರತ್ಯಾಯೋಜನೆ.**- ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಪ್ರಾಧಿಕಾರದ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುವಾದರೂ ಇದ್ದರೆ ಅವುಗಳಿಗೆ ಒಳಪಟ್ಟು, ಅದು ಅವಶ್ಯವೆಂದು ಭಾವಿಸಬಹುದಾದಂಥ, ಈ ಅಧಿನಿಯಮದ ಮೇರೆಗಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (35ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ಪ್ರತ್ಯಾಯೋಜಿಸಬಹುದು.

**30. ಪ್ರಾಧಿಕಾರದ ಆದೇಶಗಳ ಮತ್ತು ಇತರ ಲಿಖಿತಗಳ ಅಧಿಪ್ರಮಾಣನ.**– ಪ್ರಾಧಿಕಾರದ ಎಲ್ಲಾ ಆದೇಶಗಳು ಮತ್ತು ತೀರ್ಮಾನಗಳು, ಪ್ರಾಧಿಕಾರದ ಅಧ್ಯಕ್ಷನ ಅಥವಾ ಈ ಸಂಬಂಧದಲ್ಲಿ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ಇತರ ಸದಸ್ಯನ ರುಜುವಿನಿಂದ ಅಧಿಪ್ರಮಾಣಿತವಾಗತಕ್ಕದ್ದು ಮತ್ತು ಪ್ರಾಧಿಕಾರವು ಬರೆದುಕೊಟ್ಟ ಎಲ್ಲಾ ಇತರ ಲಿಖಿತಗಳು ಪ್ರಾಧಿಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಪ್ರಾಧಿಕಾರದ ಅಧಿಕಾರಿಯ ರುಜುವಿನಿಂದ ಅಧಿಪ್ರಮಾಣಿತವಾಗತಕ್ಕದ್ದು.

**31. ಪ್ರಾಧಿಕಾರದ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು.**– ಪ್ರಾಧಿಕಾರದ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಯಾವುವೇ ಉಪಬಂಧಗಳಿಗನುಸಾರವಾಗಿ ಕಾರ್ಯ ನಿರ್ವಹಿಸುವಾಗ ಅಥವಾ ನಿರ್ವಹಿಸುವರೆಂದು ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರು ಎಂಬುದಾಗಿ ಭಾವಿಸತಕ್ಕದ್ದು.

**32. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.**– (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಸರ್ಕಾರ, ಸರ್ಕಾರದ ಯಾರೇ ಅಧಿಕಾರಿ ಅಥವಾ ಪ್ರಾಧಿಕಾರದ ಯಾರೇ ಸದಸ್ಯ, ಅಧಿಕಾರಿ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗೆ ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯದಿಂದ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗಾಗಿ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆಗೆ ಅಥವಾ ಇತರ ಕಾನೂನು ವ್ಯವಹರಣೆಗೆ ಅವಕಾಶವಿರತಕ್ಕದ್ದಲ್ಲ ಮತ್ತು ವಿಶೇಷವಾಗಿ ಪ್ರವಾಹಗಳು ಮತ್ತು ಕಾಮಗಾರಿಗಳಲ್ಲಿನ ಬಿರುಕುಗಳು ಮತ್ತು ಅದರ ವೈಫಲ್ಯಗಳ ಕಾರಣದಿಂದ ಅಗತ್ಯವಾಗುವ ಪರಿಹಾರ ಕ್ರಮಗಳನ್ನು ಒದಗಿಸುವುದು ಪ್ರಾಧಿಕಾರದ ಜವಾಬ್ದಾರಿಯಾಗಿರತಕ್ಕದ್ದಲ್ಲ.

**33. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**– ಯಾವುದೇ ಸಮಯದಲ್ಲಿ ಕೇಂದ್ರ ಸರ್ಕಾರವು,–

(1) (ಎ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅವುಗಳ ಮೂಲಕ ಪ್ರಾಧಿಕಾರಕ್ಕೆ ವಿಧಿಸಲಾಗಿದ್ದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಗಂಭೀರ ಪರಿಸ್ಥಿತಿಯ ಕಾರಣದಿಂದಾಗಿ ಅದಕ್ಕೆ ಸಾಧ್ಯವಾಗಿಲ್ಲವೆಂದು; ಅಥವಾ

(ಬಿ) ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ಯಾವುದೇ ನಿರ್ದೇಶನವನ್ನು ಪಾಲಿಸುವಲ್ಲಿ, ಅಥವಾ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅವುಗಳ ಮೂಲಕ ತನಗೆ ವಿಧಿಸಲಾದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪ್ರಾಧಿಕಾರವು ಸತತವಾಗಿ ತಪ್ಪಿದೆಯೆಂದು ಮತ್ತು ತಪ್ಪುವಿಕೆಯ ಪರಿಣಾಮವಾಗಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿ ಅಥವಾ ಯಾವುದೇ ರಾಷ್ಟ್ರೀಯ ಜಲಮಾರ್ಗದ ಆಡಳಿತವು ಕ್ಷೀಣಿಸಿದೆಯೆಂದು; ಅಥವಾ

(ಸಿ) ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಧಿಕಾರವನ್ನು ರದ್ದುಪಡಿಸುವುದನ್ನು ಅವಶ್ಯವಾಗಿಸುವ ಸಂದರ್ಭಗಳು ಉಂಟಾಗಿವೆಯೆಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಗೊಳಿಸಬಹುದು:

ಪರಂತು, (ಬಿ) ಖಂಡದಲ್ಲಿ ನಮೂದಿಸಿದ ಕಾರಣಗಳಿಗಾಗಿ ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಪ್ರಾಧಿಕಾರವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಪ್ರಾಧಿಕಾರಕ್ಕೆ ಸೂಕ್ತ ಅವಕಾಶ ನೀಡತಕ್ಕದ್ದು ಮತ್ತು ಈ ಬಗ್ಗೆ ಪ್ರಾಧಿಕಾರವು ನೀಡುವ ವಿವರಣೆಗಳು ಮತ್ತು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಅವುಗಳನ್ನು ಪರಿಶೀಲಿಸತಕ್ಕದ್ದು.

(2) (1)ನೆಯ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸಿದ ತರುವಾಯ,–

(ಎ) ರದ್ದುಗೊಳಿಸಿದ ದಿನಾಂಕದಿಂದ ಅದರ ಎಲ್ಲಾ ಸದಸ್ಯರು ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಅವುಗಳ ಮೂಲಕ, ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು, (3)ನೆಯ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್ ರಚಿಸುವವರೆಗೆ ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂತಹ ವ್ಯಕ್ತಿ ಅಥವಾ ಅಂಥ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು;

(ಸಿ) ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತು (3)ನೆಯ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್ ರಚಿತವಾಗುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

(3) (1)ನೆಯ ಉಪಪ್ರಕರಣದ ಮೇರೆಗೆ ಹೊರಡಿಸಲಾದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ, ಕೇಂದ್ರ ಸರ್ಕಾರವು,–

(ಎ) ರದ್ದಿಯಾತಿ ಅವಧಿಯನ್ನು ತಾನು ಅಗತ್ಯವೆಂದು ಪರಿಗಣಿಸುವಂಥ ಆರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು; ಅಥವಾ

(ಬಿ) ಹೊಸ ನೇಮಕಾತಿಯ ಮೂಲಕ ಪ್ರಾಧಿಕಾರವನ್ನು ಪುನರ್ ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೆಯ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದವನ್ನು ತೆರವು ಮಾಡಿದ ಯಾರೇ ವ್ಯಕ್ತಿಗಳನ್ನು ನೇಮಕಾತಿಗಾಗಿ ಅನರ್ಹರೆಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು ಮೂಲತಃ (1)ನೆಯ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಥವಾ ಈ ಉಪಪ್ರಕರಣದ ಮೇರೆಗೆ ವಿಸ್ತರಿಸಲಾದ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಯಾವುದೇ ಸಮಯದಲ್ಲಿ ಈ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಒಂದು ಅಧಿಸೂಚನೆಯನ್ನು ಹೊರಡಿಸುವಂತೆ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಕೈಗೊಂಡ ಯಾವುದೇ ಕ್ರಮದ ಮತ್ತು ಹಾಗೆ ಕ್ರಮ ಕೈಗೊಳ್ಳಲು ಕಾರಣವಾದ ಸನ್ನಿವೇಶಗಳ ಪೂರ್ಣ ವರದಿಯನ್ನು ಸಂಸತ್ತಿನ ಸದನಗಳ ಮುಂದೆ ಆದಷ್ಟು ಬೇಗನೆ ಇಡುವಂತೆ ಮಾಡತಕ್ಕದ್ದು.

**34. ನಿಯಮಗಳ ರಚನಾಧಿಕಾರ.**– (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಗಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು:–

(ಎ) 4ನೆಯ ಪ್ರಕರಣದ ಮೇರೆಗೆ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಇತರ ಸೇವಾ ಷರತ್ತುಗಳು;

(ಬಿ) 5ನೇ ಪ್ರಕರಣದ ಮೇರೆಗೆ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು;

(ಸಿ) 9ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸಲಹಾ ಸಮಿತಿಗೆ ಸಂಬಂಧಪಟ್ಟ ವಿಷಯಗಳು;

(ಡಿ) 14ನೇ ಪ್ರಕರಣದ (4)ನೆಯ ಉಪಪ್ರಕರಣದ ಮೇರೆಗೆ ನಿಯಮಿಸಬೇಕಾದ ಮೊತ್ತ;

(ಇ) ಪ್ರಾಧಿಕಾರವು 20ನೇ ಪ್ರಕರಣದ ಮೇರೆಗೆ ತನ್ನ ಬಜೆಟನ್ನು ಮತ್ತು 22ನೆಯ ಪ್ರಕರಣದ ಮೇರೆಗೆ ತನ್ನ ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಸಮಯದೊಳಗೆ ಸಿದ್ಧಪಡಿಸಬೇಕೋ ಆ ನಮೂನೆ ಮತ್ತು ಸಮಯ;

(ಎಫ್) 21ನೇ ಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ನಿಧಿಗಳನ್ನು ಹೂಡಬಹುದಾದ ರೀತಿ;

(ಜಿ) 23ನೇ ಪ್ರಕರಣದ ಮೇರೆಗೆ ಪ್ರಾಧಿಕಾರದ ಲೆಕ್ಕಗಳನ್ನು ಇಡಬೇಕಾದ ಮತ್ತು ಪರಿಶೋಧಿಸಬೇಕಾದ ರೀತಿ;

(ಹೆಚ್) 28ನೇ ಪ್ರಕರಣದ ಮೇರೆಗೆ ಪ್ರವೇಶಾಧಿಕಾರವನ್ನು ಚಲಾಯಿಸುವುದಕ್ಕೆ ಸಂಬಂಧಪಟ್ಟ ಷರತ್ತುಗಳು ಮತ್ತು ನಿರ್ಬಂಧಗಳು ಮತ್ತು ಆ ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ವಿಷಯಗಳು; ಮತ್ತು

(ಐ) ಯಾವ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದಾಗಿದೆಯೋ ಅಥವಾ ಯಾವ ವಿಷಯದ ಸಂಬಂಧದಲ್ಲಿ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಬೇಕಾಗಿದೆಯೋ ಅಥವಾ ಕಲ್ಪಿಸಬಹುದಾಗಿದೆಯೋ ಆ ಯಾವುದೇ ಇತರ ವಿಷಯ.

**35. ವಿನಿಯಮ ರಚನಾಧಿಕಾರ.-** (1) ಪ್ರಾಧಿಕಾರವು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಸಾಮಾನ್ಯವಾಗಿ ಈ ಅಧಿನಿಯಮ ಮತ್ತು ವಿನಿಯಮಗಳಿಗೆ ಸುಸಂಗತವಾದ ವಿನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮಗಳು ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) 3ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಯಾರೇ ವ್ಯಕ್ತಿಯನ್ನು ಸೇರಿಸಿಕೊಳ್ಳಬೇಕಾದ ರೀತಿ ಮತ್ತು ಉದ್ದೇಶಗಳು;

(ಬಿ) 8ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗಿನ ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಇತರ ಅಧಿಕಾರಿಗಳ ಮತ್ತು ನೌಕರರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಸಿ) ಪ್ರಾಧಿಕಾರದ ಸಾಮಾನ್ಯ ಮುದ್ರೆಯನ್ನು ಹಾಕಿ ಮೊಹರು ಮಾಡಬೇಕಾಗಿರುವ ಕರಾರುಗಳು ಅಥವಾ ಕರಾರುಗಳ ವರ್ಗ ಮತ್ತು ಪ್ರಾಧಿಕಾರವು ಮಾಡಿಕೊಳ್ಳಬಹುದಾದ ಕರಾರಿನ ನಮೂನೆ ಮತ್ತು ರೀತಿ;

(ಡಿ) 14ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಉಲ್ಲೇಖಿಸಲಾದಂಥ ವಿಷಯಗಳಿಗೆ ಸಂಬಂಧಪಟ್ಟ ಯಾವುದೇ ಪ್ರಕಾರ್ಯಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೆರವೇರಿಸತಕ್ಕದ್ದೋ ಆ ರೀತಿ ಮತ್ತು ಷರತ್ತುಗಳು;

(ಇ) ರಾಷ್ಟ್ರೀಯ ಜಲಮಾರ್ಗಗಳ ಮೇಲಣ ರಸ್ತೆಯ ನಿಯಮ;

(ಎಫ್) ಮೂಲ ಪರಿಕರಗಳು ಮತ್ತು ಮೂಲ ಪರಿಕರ ಸೌಲಭ್ಯಗಳ ಸುರಕ್ಷಿತ, ಸಮರ್ಥ, ಮತ್ತು ಅನುಕೂಲಕರ ಉಪಯೋಗ, ನಿರ್ವಹಣೆ ಮತ್ತು ನಿಯಂತ್ರಣ;

(ಜಿ) ರಾಷ್ಟ್ರೀಯ ಜಲಮಾರ್ಗಗಳ ಮೇಲೆ ತರಲಾದ ಸರಕುಗಳನ್ನು ಸ್ವೀಕರಿಸುವುದು, ಒಯ್ಯುವುದು, ದಾಸ್ತಾನು ಮಾಡುವುದು ಮತ್ತು ಸಾಗಿಸುವುದು ಮತ್ತು ಸರಕನ್ನು ಇಳಿಸುವ ಮುಂಚೆ ಹಾನಿಗೊಳಗಾಗಿರಬಹುದಾದ ಅಥವಾ ಹಾನಿಗೊಳಗಾಗಿದೆಯೆಂದು ಹೇಳಲಾದ ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳುವಲ್ಲಿ ಅನುಸರಿಸತಕ್ಕ ರೀತಿ;

(ಹೆಚ್) ಹಡಗು ಕಟ್ಟೆಗಳಲ್ಲಿ, ಸರಕು ಕಟ್ಟೆಗಳಲ್ಲಿ, ಇಳಿಕಟ್ಟೆಗಳಲ್ಲಿ, ಇಳಿಯುವ ಸ್ಥಳಗಳಲ್ಲಿ ಹಡಗುಗಳಿಂದ ಸರಕುಗಳನ್ನು ಇಳಿಸತಕ್ಕದೆಂಬುದನ್ನು ಮತ್ತು ತುಂಬತಕ್ಕದೆಂಬುದನ್ನು ನಿಯಂತ್ರಿಸುವುದು, ಘೋಷಿಸುವುದು ಮತ್ತು ನಿರ್ಧರಿಸುವುದು;

(ಐ) ರಾಷ್ಟ್ರೀಯ ಜಲಮಾರ್ಗದ ಮೇಲೆ ಹಡಗುಗಳಲ್ಲಿ ಸರಕುಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಪರಿಸ್ಥಿತಿಗಳಲ್ಲಿ ತುಂಬತಕ್ಕದೆಂಬುದನ್ನು ಮತ್ತು ಇಳಿಸತಕ್ಕದೆಂಬುದನ್ನು ನಿಯಂತ್ರಿಸುವುದು;

(ಜೆ) ರಾಷ್ಟ್ರೀಯ ಜಲಮಾರ್ಗದಿಂದ ಉಪದ್ರವಕಾರಿ ಅಥವಾ ಇತರ ಅನಪೇಕ್ಷಿತ ವ್ಯಕ್ತಿಗಳನ್ನು ಮತ್ತು ಅತಿಕ್ರಮಣಕಾರರನ್ನು ಹೊರದೂಡುವುದು.

(ಕೆ) ಬಂಧಪತ್ರಗಳು, ಡಿಬೆಂಚರುಗಳು ಅಥವಾ ಇತರ ಲಿಖಿತಗಳನ್ನು ಹೊರಡಿಸುವುದಕ್ಕೆ ನಿಬಂಧನೆಗಳು ಮತ್ತು ಷರತ್ತುಗಳು;

(ಎಲ್) 5ಎ ಪ್ರಕರಣದ (1)ನೇ ಉಪ ಪ್ರಕರಣದಡಿಯಲ್ಲಿ ಕೋರಂ ಒಳಗೊಂಡಂತೆ ಅದರ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ ಸಂಬಂಧಿಸಿದ ವೇಳೆ, ಸ್ಥಳ ಮತ್ತು ಕಾರ್ಯವಿಧಾನದ ನಿಯಮಗಳು.

(3) (2)ನೆಯ ಉಪಪ್ರಕರಣದ (ಸಿ) ಯಿಂದ (ಜೆ) ವರೆಗಿನ ಯಾವುದೇ ಖಂಡದ ಮೇರೆಗೆ ರಚಿಸಲಾದ ಯಾವುದೇ ವಿನಿಯಮವು, ಅದರ ಉಲ್ಲಂಘನೆ ಮಾಡುವುದು, ಐದುನೂರು ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದೆಂದು ಮತ್ತು ಉಲ್ಲಂಘನೆಯು ಮುಂದುವರಿಯುತ್ತಿರುವ ಸಂದರ್ಭದಲ್ಲಿ, ಅಂಥ ಉಲ್ಲಂಘನೆಗಾಗಿ ಅಪರಾಧ ನಿರ್ಣಯವಾದ ತರುವಾಯ ಪ್ರತಿಯೊಂದು ದಿನಕ್ಕೆ ಇಪ್ಪತ್ತು ರೂಪಾಯಿವರೆಗಿನ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯವಾಗತಕ್ಕದ್ದೆಂದು ಉಪಬಂಧಿಸಬಹುದು.

**36. ನಿಯಮಗಳು ಮತ್ತು ವಿನಿಯಮಗಳನ್ನು ಸಂಸತ್ತಿನ ಮುಂದಿಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ಅದಕ್ಕೆ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಅಥವಾ ವಿನಿಯಮವನ್ನು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು ಅಥವಾ ವಿನಿಯಮವು ಆ ತರುವಾಯ ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**37. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದು ಅವಶ್ಯವೆಂದು ಕಂಡುಬರಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**38. 1982ರ 49ನೇ ಅಧಿನಿಯಮದ ತಿದ್ದುಪಡಿ.**- ರಾಷ್ಟ್ರೀಯ ಜಲಮಾರ್ಗ (ಗಂಗಾ-ಭಾಗೀರಥಿ-ಹೂಗ್ಲಿ ನದಿಯ ಅಲಹಾಬಾದ್- ಹಾಲ್ದಿಯಾ ಹರಹು) ಅಧಿನಿಯಮ, 1982ರಲ್ಲಿ,-

(ಎ) 3ನೇ ಪ್ರಕರಣದಲ್ಲಿ "ಕೇಂದ್ರ ಸರ್ಕಾರ" ಎಂಬ ಪದಗಳಿಗೆ ಬದಲಾಗಿ "ಒಕ್ಕೂಟ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು ಮತ್ತು "ಇದರಲ್ಲಿ ಇನ್ನು ಮುಂದೆ ಉಪಬಂಧಿಸಿರುವಷ್ಟರ ಮಟ್ಟಿಗೆ" ಎಂಬ ಪದಗಳ ಬದಲಾಗಿ "ಭಾರತದ ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಅಧಿನಿಯಮ, 1985ರಲ್ಲಿ ಉಪಬಂಧಿಸಿರುವಷ್ಟರ ಮಟ್ಟಿಗೆ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸತಕ್ಕದ್ದು.

(ಬಿ) 4ರಿಂದ 15ರ ವರೆಗಿನ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು.

* * * *